ಶ್ರೀ ವೆಂಕಪ್ಪ ರಾಮಪ್ಪ ಬಿ ಪಾಟೀಲ್ (ಲೋಕಾಪುರ ಸುಣ್ಣದಕಲ್ಲು ಗಣಿಗಾರಿಕೆ), ಸರ್ವೆ ನಂ. 115/1, 116/1 ಮತ್ತು 130/3, ಎಂ.ಎಲ್ ನಂ. 2407, ಜಾಲಿಕಟ್ಟಿ ಬಿ.ಕೆ., ಲೋಕಾಪುರ ಪೋಸ್ಟ್, ತಾ॥ ಮುಧೋಳ, ಬಾಗಲಕೋಟೆ ಜಿಲ್ಲೆ, ಕರ್ನಾಟಕ ರಾಜ್ಯರವರ, ಹಾಲಿ ಇರುವ ಲೋಕಾಪುರ ಸುಣ್ಣದ ಕಲ್ಲು ಗಣಿಗಾರಿಕೆ ಸಾಮರ್ಥ್ಯವನ್ನು 20,000 ಟಿಪಿಎಯಿಂದ 1,00,000 ಟಿಪಿಎಗೆ ಹೆಚ್ಚಿಸಲು ಪ್ರಸ್ತಾಪಿಸಿದ್ದು, ಇದರ ಪ್ರಯುಕ್ತ ಸಾರ್ವಜನಿಕ ಪರಿಸರ ಕುರಿತು ಆಲಿಕೆಯ ನಡುವಳಿಕೆಗಳು.

ದಿನಾಂಕ : 25/06/2019

ಸಮಯ : 11.00 ಗಂಟೆ ಬೆಳಿಗ್ಗೆ

ಸ್ಥಳ : ಯೋಜನೆಯ ಸ್ಥಳದಲ್ಲಿ

- ಶ್ರೀ ವೆಂಕಪ್ಪ ರಾಮಪ್ಪ ಬಿ ಪಾಟೀಲ್ (ಲೋಕಾಪುರ ಸುಣ್ಣದಕಲ್ಲು ಗಣಿಗಾರಿಕೆ), ಸರ್ವೆ ನಂ. 115/1, 116/1 ಮತ್ತು 130/3, ಎಂ.ಎಲ್ ನಂ. 2407, ಜಾಲಿಕಟ್ಟಿ ಬಿ.ಕೆ., ಲೋಕಾಪುರ ಪೋಸ್ಟ್, ತಾ॥ ಮುಧೋಳ, ಬಾಗಲಕೋಟೆ ಜಿಲ್ಲೆ, ಕರ್ನಾಟಕ ರಾಜ್ಯರವರು, ಈ ಕೆಳಗಿನ ಯೋಜನೆಗಳನ್ನು ಕೈಗೊಳ್ಳಲು ಉದ್ದೇಶಿಸಿರುತ್ತಾರೆ.
- ಹಾಲಿ ಇರುವ ಲೋಕಾಪುರ ಸುಣ್ಣದ ಕಲ್ಲು ಗಣಿಗಾರಿಕೆ ಸಾಮರ್ಥ್ಯವನ್ನು 20,000 ಟಿಪಿಎಯಿಂದ 1,00,000 ಟಿಪಿಎಗೆ ಹೆಚ್ಚಿಸುವುದು.

**ಯೋಜನೆ ಸ್ಥಳದ ವಿವರಗಳು:-**

ಸರ್ವೆ ನಂ. 115/1, 116/1 ಮತ್ತು 130/3, ಎಂ.ಎಲ್ ನಂ. 2407, ಜಾಲಿಕಟ್ಟಿ ಬಿ.ಕೆ., ಲೋಕಾಪುರ ಪೋಸ್ಟ್, ತಾ॥ ಮುಧೋಳ, ಬಾಗಲಕೋಟೆ ಜಿಲ್ಲೆ, ಕರ್ನಾಟಕ ರಾಜ್ಯ

-: ಸಭೆಗೆ ಹಾಜರಿದ್ದ ಅಧಿಕಾರಿಗಳು :-

ಸದರ ಸಾರ್ವಜನಿಕ ವಿಚಾರಣಾ ಸಭೆಯನ್ನು ಪರಿಸರ ಸಂರಕ್ಷಣೆ ಹಾಗೂ ಅರಣ್ಯ ಸಚಿವಾಲಯ ಭಾರತ ಸರ್ಕಾರದ ಪರಿಸರ ಆಘಾತ ಅಧ್ಯಯನದ ಅಧಿಸೂಚನೆ ದಿನಾಂಕ 14-09-2006ರ ತಿದ್ದುಪಡಿ ದಿನಾಂಕವು 01-12-2009ರ ಮೇರೆಗೆ ಜರುಗಿಸಲಾಯಿತು.

**-: ಸಾರ್ವಜನಿಕ ವಿಚಾರಣಾ ಮಂಡಳಿ :-**

**ಹಾಜರಿದ್ದ ಸಾರ್ವಜನಿಕ ವಿಚಾರ ಮಂಡಳಿ ಸದಸ್ಯರು**

| | | |
|---|---|---|
| 01. | ಶ್ರೀ. ದುರಗೇಶ ಕೆ ರುದ್ರಾಕ್ಷಿ, ಮಾನ್ಯ ಅಪರ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ಪರಿಸರ ಸಾರ್ವಜನಿಕ ಸಮಿತಿ, ಬಾಗಲಕೋಟೆ. | ಅಧ್ಯಕ್ಷರು |
| 02 | ಶ್ರೀ. ವಿ. ಟಿ. ಕಡಕಭಾವಿ, ಹಿರಿಯ ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ವಲಯ ಕಛೇರಿ, ಧಾರವಾಡ. | ಸದಸ್ಯರು |
| 03. | ಶ್ರೀ ಎಮ್. ಎ. ಮನಿಯಾರ, ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪ್ರಾದೇಶಿಕ ಕಛೇರಿ, ಬಾಗಲಕೋಟೆ | ಸದಸ್ಯರು |



Scanned by CamScanner

| ಯೋಜನೆಯ ಪ್ರತಿಪಾದಕರು | | |
|---|---|---|
| 1 | ಶ್ರೀ. ಸಿ. ಡಿ. ಪ್ರಭಾಕರರೆಡ್ಡಿ | ಪರಿಸರ ತಜ್ಞರು,<br>M/s. Sri Sai Manasa Nature Tech Pvt Ltd., Hyderabad. |
| 2 | ಶ್ರೀ. ವಿಷ್ಣುಶರ್ಮಾ ಚೌಧರಿ | ಪರಿಸರ ತಜ್ಞರು,<br>M/s. Sri Sai Manasa Nature Tech Pvt Ltd., Hyderabad. |
| 3 | ಶ್ರೀ. ಮಂಜುನಾಥ | ಗಣಿ ಮಾಲೀಕರು |
| 4 | ಶ್ರೀ. ಕಮಲೇಶ ಪಾಟೀಲ | ಗಣಿ ವ್ಯವಸ್ಥಾಪಕರು |
| 5 | ಶ್ರೀ. ಜಿ ವಿ ಪಾಟೀಲ | ಪರಿವೀಕ್ಷಕರು |

ಕೇಂದ್ರ ಪರಿಸರ ಹಾಗೂ ಅರಣ್ಯ ಮಂತ್ರಾಲಯದ ಭಾರತ ಸರ್ಕಾರದ ಪರಿಸರ ಆಘಾತ ಅಧ್ಯಯನದ ಅಧಿಸೂಚನೆಯ ದಿನಾಂಕ:14-09-2006 (ತಿದ್ದುಪಡಿ ಅಧಿಸೂಚನೆ ದಿನಾಂಕ : 01-12-2009) ರ ಪ್ರಕಾರ ಪರಿಸರ ವಿಮೋಚನಾ ಪತ್ರವನ್ನು ನೀಡುವ ಮುಂಚೆ ಸಾರ್ವಜನಿಕ ಆಲಿಕೆಯನ್ನು ನಿರ್ಧರಿಸಿದ ಯೋಜನೆಯ ಸ್ಥಳದಲ್ಲಿ ಜರುಗಿಸುವುದು ಕಡ್ಡಾಯವಾಗಿರುತ್ತದೆ ಹಾಗೂ ಇದನ್ನು ಮಾನ್ಯ ಜಿಲ್ಲಾಧಿಕಾರಿಗಳು ಅಥವಾ ಇತರೆ ಹೆಚ್ಚುವರಿ ಜಿಲ್ಲಾಧಿಕಾರಿಗಳವರ ಹುದ್ದೆಗಿಂತ ಕೆಳಗಿರದಂತಹ ಅಧಿಕಾರಿಗಳ ಸಭಾದ್ಯಕ್ಷತೆಯಲ್ಲಿ ಜರುಗತಕ್ಕದು.

ರಾಜ್ಯ ಮಟ್ಟದ ಅಪ್ರೈಸಲ್ ತಜ್ಞರ ಸಮಿತಿ, ಕರ್ನಾಟಕ, ಇವರ Terms of reference ಪತ್ರದ ದಿನಾಂಕ: 05-07-2016ರಂತೆ ಹಾಗೂ ಮಾನ್ಯ ಜಿಲ್ಲಾಧಿಕಾರಿಗಳು, ಬಾಗಲಕೋಟೆ, ಇವರ ಪತ್ರದ ದಿನಾಂಕ: 02-05-2019ರಂದು ಸಮ್ಮತಿಸಿರುವ ಪ್ರಕಾರ ಪರಿಸರ ಸಾರ್ವಜನಿಕ ಆಲಿಕೆಯನ್ನು ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯವತಿಯಿಂದ ದಿನಾಂಕ:- 25/06/2019 ರಂದು ಮಾನ್ಯ ಅಪರ ಜಿಲ್ಲಾಧಿಕಾರಿಗಳು ಬಾಗಲಕೋಟೆ ಇವರ ಸಭಾಧ್ಯಕ್ಷತೆಯಲ್ಲಿ ಯೋಜನಾ ಸ್ಥಳದಲ್ಲಿ ಪರಿಸರ ಕುರಿತು ಸಾರ್ವಜನಿಕಾ ವಿಚಾರಣಾ ಸಭೆಯನ್ನು ಜರುಗಿಸಲಾಯಿತು.

ಪರಿಸರ ಆಘಾತ ಅಧ್ಯಯನದ ಅಧಿಸೂಚನೆ ದಿನಾಂಕ: 14-09-2006ರ (ತಿದ್ದುಪಡಿ ದಿನಾಂಕ:01-12-2009) ಪ್ರಕಾರ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಇವರಿಂದ 30 ದಿನಗಳ ಮುಂಚಿತ ಪತ್ರಿಕಾ ಪ್ರಕಟಣೆಯನ್ನು ನೀಡಲಾಗಿತ್ತು. ಸದರಿ ಪ್ರಕಟಣೆಯನ್ನು ರಾಜ್ಯದಲ್ಲಿ ಪ್ರಚಲಿತವಿರುವ "ಕನ್ನಡ ಪ್ರಭ" ಕನ್ನಡ ದಿನಪತ್ರಿಕೆಯಲ್ಲಿ ಹಾಗೂ ರಾಷ್ಟ್ರ ಮಟ್ಟದಲ್ಲಿ ಪ್ರಚಲಿತವಿರುವ "The Deccan Herald" ಆಂಗ್ಲ ದಿನಪತ್ರಿಕೆಯಲ್ಲಿ ದಿನಾಂಕ:- 24/05/2019ರಂದು ಹಾಗೂ ಜಿಲ್ಲೆಯಲ್ಲಿ ಪ್ರಚಲಿತವಿರುವ ಸ್ಥಳಿಯ ಕನ್ನಡ ದಿನಪತ್ರಿಕೆಯಾದ "ಸಂಜೆ ದರ್ಶನ"ದಲ್ಲಿ ದಿನಾಂಕ:- 25/05/2019 ರಂದು ಪ್ರಕಟಣೆಯನ್ನು ನೀಡಲಾಗಿದೆ.

ಯೋಜನಾ ಸ್ಥಳದಲ್ಲಿರುವ ಹಾಗೂ ಸದರಿ ಯೋಜನೆಯಿಂದ ಪರಿಣಾಮಕ್ಕೆ ಒಳಗಾಗಬಹುದಾದ ರಹವಾಸಿಗಳು ಪರಿಸರ ಗುಂಪುಗಳು, ಹಾಗೂ ಇತರರ ಸಲಹೆ ಅಭಿಪ್ರಾಯ ಹಾಗೂ ಆಕ್ಷೇಪಣೆಗಳನ್ನು ಮೌಖಿಕವಾಗಿ ಅಥವಾ ಲಿಖಿತದಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಥವಾ ಅಧ್ಯಕ್ಷರು ಸಾರ್ವಜನಿಕ ವಿಚಾರಣಾ ಸಮಿತಿ ಇವರಿಗೆ ಅಧಿಸೂಚನೆ ಪ್ರಕಟಣೆಯಾದ ದಿನಾಂಕದಿಂದ 30 ದಿನಗಳ ಒಳಗಾಗಿ ಮಂಡಿಸಲು ಅವಕಾಶವನ್ನು ನೀಡಲಾಗಿತ್ತು.



Scanned by CamScanner

ತ್ವರಿತ ಪರಿಸರ ಆಘಾತ ಅಂದಾಜೀಕರಣದ ಕರಡು ವರದಿಯ ಪ್ರತಿಯನ್ನು ಹಾಗೂ ತ್ವರಿತ ಪರಿಸರ ಆಘಾತ ಅಂದಾಜೀಕರಣದ ಕರಡು ವರದಿಯ ಸಾರಾಂಶವನ್ನು ಕನ್ನಡ ಹಾಗೂ ಆಂಗ್ಲ ಭಾಷೆಯಲ್ಲಿ ಸಾರ್ವಜನಿಕರ ಪರಾಮರ್ಶೆಗೆ ಹಾಗೂ ಮಾಹಿತಿಗಾಗಿ ಈ ಕೆಳಗೆ ನಮೂದಿಸಿದ ಸ್ಥಳಗಳಲ್ಲಿ ಇಡಲಾಗಿತ್ತು.

- ಜಿಲ್ಲಾಧಿಕಾರಿಗಳ ಕಛೇರಿ, ಬಾಗಲಕೋಟೆ, ಜಿಲ್ಲೆ: ಬಾಗಲಕೋಟೆ.
- ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಜಿಲ್ಲಾ ಪಂಚಾಯತ, ಬಾಗಲಕೋಟೆ.
- ಜಿಲ್ಲಾ ಕೈಗಾರಿಕಾ ಕೇಂದ್ರ, ಬಾಗಲಕೋಟೆ.
- ನಗರಸಭೆ, ಮುಧೋಳ, ಬಾಗಲಕೋಟೆ ಜಿಲ್ಲೆ.
- ಗ್ರಾಮ ಪಂಚಾಯತ ಕಾರ್ಯಾಲಯ, ಲೋಕಾಪುರ ಗ್ರಾಮ, ಮುಧೋಳ ತಾಲ್ಲೂಕು.
- ಪ್ರಾದೇಶಿಕ ಅಧಿಕಾರಿಗಳ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬಾಗಲಕೋಟೆ.
- ಹಿರಿಯ ಪರಿಸರ ಅಧಿಕಾರಿಗಳು,ವಲಯ ಕಛೇರಿ,ಕ.ರಾ.ಮಾ.ನಿ.ಮಂಡಳಿ,ಧಾರವಾಡ.
- ಕೇಂದ್ರ ಅರಣ್ಯ ಮತ್ತು ಪರಿಸರ ಮಂತ್ರಾಲಯ,ದಕ್ಷಿಣ ವಲಯ ಕಛೇರಿ ನಂ ಇ-೩/೨೪೦,ಕೇಂದ್ರೀಯ ಸದನ,೪ನೇ ಮಹಡಿ,ಇ ಮತ್ತು ಎಫ್ ವಿಂಗ್ಸ ಮುಖ್ಯ ರಸ್ತೆ,೧೭ ನೇ ಮುಖ್ಯ ರಸ್ತೆ,೨ನೇ ಬ್ಲಾಕ ಕೋರಮಂಗಳ,ಬೆಂಗಳೂರು.
- ಸಹಾಯ ಕೇಂದ್ರ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ನೆಲ ಅಂತಸ್ತು, ನಂ.೪೯, ಪರಿಸರ ಭವನ ಚರ್ಚ್‌ಸ್ಟ್ರೀಟ, ಬೆಂಗಳೂರು.

➢ ಮಾನ್ಯ ಅಪರ ಜಿಲ್ಲಾಧಿಕಾರಿಗಳು ಹಾಗೂ ಸಭಾಧ್ಯಕ್ಷರು, ಬಾಗಲಕೋಟೆ, ಇವರು ಸಾರ್ವಜನಿಕ ಆಲಿಕೆ ಪಟ್ಟಿ, ಜಾಹೀರಾತುಗಳಲ್ಲಿ ನೀಡಿದ ಎಲ್ಲ ಅಧಿಸೂಚನೆಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಇವುಗಳಿಂದ ಸಮರ್ಪಕ ಪ್ರಕಟಣೆಯಾಗಿದೆಯೋ ಹೇಗೆ ಎಂಬುದನ್ನು ಅವಲೋಕಿಸಿದರು ಹಾಗೂ ಇದು ಕಾನೂನಿನ ಅಧಿನಿಯಮಾನುಸಾರವಾಗಿದೆಯೋ ಹೇಗೆ ಎಂಬುದನ್ನು ಪರಿಶೀಲಿಸಿದರು.

ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬಾಗಲಕೋಟೆ ಇವರಲ್ಲಿ ದಿನಾಂಕ:-24-06-2019 ರವರೆಗೆ 01 ಈ-ಮೇಲ್ ಮೂಲಕ ಅರ್ಜಿಯು ಸ್ವೀಕೃತವಾಗಿರುತ್ತದೆ. ಅವುಗಳ ವಿವರ ಈ ಕೆಳಗಿನಂತಿವೆ.

➢ ಶ್ರೀ. ವೂಟಕುರಿ ಸುನಂದಾ ರೆಡ್ಡಿ, ಪರಿಸರ ತಜ್ಞರು, ಇವರಿಂದ ದಿನಾಂಕ: 18/06/2019, ಇದರ ಪ್ರತಿಯನ್ನು ಅನುಬಂಧ-1ರ ಮೂಲಕ ಲಗತ್ತಿಸಲಾಗಿದೆ.

ದಿನಾಂಕ:-25/06/2019 ರಂದು ಜರುಗಿಸಿದ ಸಾರ್ವಜನಿಕ ವಿಚರಣಾ ಸಭೆಗೆ ಆಗಮಿಸಿದ ಅಪರ ಜಿಲ್ಲಾಧಿಕಾರಿಗಳು ಬಾಗಲಕೋಟೆ, ಸಾರ್ವಜನಿಕರು, ಬೇರೆ ಬೇರೆ ಇಲಾಖೆಗಳ ಅಧಿಕಾರಿಗಳ, ಚುನಾಯಿತ ಪ್ರತಿನಿಧಿಗಳು ಹಾಗೂ ಸಂಸ್ಥೆಯ ಪದಾಧಿಕಾರಿಗಳು ಹಾಗೂ ಸಿಬ್ಬಂದಿಗಳಿಗೆ ಶ್ರೀ.ಎಮ್.ಎ. ಮನಿಯಾರ, ಪರಿಸರ ಅಧಿಕಾರಿಗಳು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಪ್ರಾದೇಶಿಕ ಕಾರ್ಯಾಲಯ ಬಾಗಲಕೋಟೆ ಇವರು ಆತ್ಮಿಯವಾಗಿ ಸ್ವಾಗತಿಸಿದರು ಸದರಿಯವರು ಪರಿಸರ ಹಾಗೂ ಅರಣ್ಯ ಸಚಿವಾಲಯ ಭಾರತ ಸರ್ಕಾರ ಹಾಗೂ ಈ.ಐ.ಎ. ಅಧಿಸೂಚನೆ ಪ್ರಕಾರ ಸಾರ್ವಜನಿಕ ವಿಚಾರಣೆಯ ಅವಶ್ಯಕತೆ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಿದರು.ಈ ಬಗ್ಗೆ 30 ದಿನಗಳ ಮುಂಚಿತವಾಗಿ ಪ್ರಕಟಣೆಯನ್ನು ನೀಡಲಾಗಿತ್ತು ಎಂದು ಹಾಗೂ ಸಾರ್ವಜನಿಕ ವಿಚಾರಣೆಯ ನಿಯಮಾವಳಿ ಬಗ್ಗೆ ವಿವರಗಳನ್ನು ನೀಡಿದರು. ಸದರಿಯವರು ಮಾನ್ಯ ಅಪರ ಜಿಲ್ಲಾಧಿಕಾರಿಗಳಿಗೆ ಸಭೆಯ ಅಧ್ಯಕ್ಷತೆಯನ್ನು



Scanned by CamScanner

ವಹಿಸಲು ಕೋರಿದರು ಹಾಗೂ ಸಾರ್ವಜನಿಕರಿಗೆ ಯೋಜನೆಯ ಬಗ್ಗೆ ತಮ್ಮ ಅಭಿಪ್ರಾಯ ಹಾಗೂ ವಿಚಾರಗಳನ್ನು ಮೌಖಿಕವಾಗಿ ಅಥವಾ ಲಿಖಿತದಲ್ಲಿ ಮಂಡಿಸಲು ಕೋರಿದರು.ಸಭೆಯ ನಡುವಳಿಗಳನ್ನು ವಿಡಿಯೋ ಗ್ರಾಫ ಮಾಡಲಾಗುವುದು ಎಂದು ವಿವರಿಸಿದರು.

ಮೇ!! M/s. Sri Sai Manasa Nature Tech Pvt Ltd., Hyderabad., ಸಂಸ್ಥೆಯ ಪರಿಸರ ತಜ್ಞರಾದ ಶ್ರೀ. ಸಿ. ಡಿ. ಪ್ರಭಾಕರೆಡ್ಡಿ., ಇವರು ಕನ್ನಡದಲ್ಲಿ ನಿಯೋಜಿತ ಯೋಜನೆಯ ಉದ್ದೇಶಗಳ ಬಗ್ಗೆ ಚುಕ್ಕಿ ಬಿಂದು ಪ್ರದರ್ಶನದ ಮೂಲಕ ವಿವರಗಳನ್ನು ನೀಡಿದರು. ಸದರಿಯವರು ಯೋಜನಾ ಪ್ರಸಕ್ತ ಪ್ರದೇಶದಲ್ಲಿರುವ ಪ್ರಸ್ತುತ ಪರಿಸರ ದೃಶ್ಯ, ಸದರಿ ಯೋಜನೆಯಿಂದ ಪರಿಸರದ ಮೇಲೆ ಆಗಬಹುದಾದ ಪರಿಣಾಮ, ಪರಿಸರ ವ್ಯವಸ್ಥಾಪನೆ ಯೋಜನೆ, ಪರಿಸರ ಮಾಲಿನ್ಯವನ್ನು ನಿಯಂತ್ರಿಸಲು ರೂಪಿಸಿದ ಕ್ರಮಗಳು ಇತ್ಯಾದಿಗಳ ಬಗ್ಗೆ ವಿವರಗಳನ್ನು ಮಂಡಿಸಿದರು.ಇವುಗಳ ಹಾರ್ಡಕಾಪಿಯನ್ನು ಅನುಂಬಂಧ – 2ರ ಮೂಲಕ ಲಗತ್ತಿಸಲಾಗಿದೆ.

ವಿವಿಧ ರಾಜಕೀಯ ಪಕ್ಷಗಳ ಮುಖಂಡರು, ಸುತ್ತಮುತ್ತಲಿನ ಗ್ರಾಮಸ್ಥರು, ಸರ್ಕಾರ ಸಂಘ ಸಂಸ್ಥೆಗಳು, ವಿದ್ಯಾರ್ಥಿಗಳು, ಪತ್ರಕರ್ತರು, ಹಾಗೂ ಆಸಕ್ತಿ ಹೊಂದಿದ ಇತರರು ಸದರಿ ಸಭೆಯಲ್ಲಿ ಭಾಗವಹಿಸಿದ್ದರು. ಸಭೆಯಲ್ಲಿ ಭಾಗವಹಿಸಿದವರ ಯಾದಿಯನ್ನು ಅನುಬಂಧ-3ರ ಮೂಲಕ ಲಗತ್ತಿಸಲಾಗಿದೆ. ಮಾನ್ಯ ಅಪರ ಜಿಲ್ಲಾಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದವರು ತಮ್ಮ ಅಭಿಪ್ರಾಯವನ್ನು ಲಿಖಿತ ರೂಪದಲ್ಲಿಯೂ ನೀಡಬಹುದೆಂದು ಸೂಚಿಸಿದರು.

ಸಾರ್ವಜನಿಕ ವಿಚಾರಣೆಯ ಕಾಲಕ್ಕೆ 05 ಜನರು ತಮ್ಮ ವಿಚಾರಗಳನ್ನು ವ್ಯಕ್ತಪಡಿಸಿದರು ಅದರ ವಿವರಗಳು ಈ ಕೆಳಗಿನಂತಿವೆ:

1. ಶ್ರೀ. ವಸಂತಗೌಡ ಪಾಟೀಲ, ಜಾಲಿಕಟ್ಟಿ ಬಿ.ಕೆ.

- ಸದರಿ ಗಣಿ ಉದ್ದಿಮೆಯವರು ಕಳೆದ 8-10 ವರ್ಷಗಳಿಂದ ಗಣಿ ಉದ್ದಿಮೆಯನ್ನು ನಡೆಸುತ್ತಿದ್ದಾರೆ. ಸದರಿಯವರು ಸಾರ್ವಜನಿಕರಿಗೆ ನೆರವಾಗುವಂತಹ ಯೋಜನೆಗಳಿಗೆ ತುಂಬಾ ಸಹಾಯವನ್ನು ಕೂಡ ಮಾಡಿರುತ್ತಾರೆಂದು ಸಭೆಗೆ ತಿಳಿಸಿದರು.
- ಸದರಿ ಸುಣ್ಣದ ಕಲ್ಲು ಗಣಿಗಾರಿಕೆಯನ್ನು 20,000 ಟಿ.ಪಿ.ಎ. ದಿಂದ 1,00,000 ಟಿ.ಪಿ.ಎ.ಗೆ ಹೆಚ್ಚಿಸಲು ತಮ್ಮದು ಯಾವುದೇ ರೀತಿಯ ಅಭ್ಯಂತರವಿಲ್ಲವೆಂದು ಸಭೆಗೆ ತಿಳಿಸಿದರು ಹಾಗೂ ಸದರಿ ಯೋಜನೆಯನ್ನು ಶೀಘ್ರವೇ ಕಾರ್ಯಾನುಷ್ಠಾನಗೊಳಿಸಲು ಎಲ್ಲರೂ ಸಹಕರಿಸಬೇಕೆಂದು ವಿನಂತಿಸಿಕೊಂಡರು.

2. ಶ್ರೀ. ಆಂಜನೇಯ ನಾಗನಹಳ್ಳಿ, ರಾಣೆಬೆನ್ನೂರು, ಹಾವೇರಿ ಜಿಲ್ಲೆ.

- ಇದೇ ಮೊದಲ ಬಾರಿಗೆ ವಿರೋಧವಿಲ್ಲದೆ ನಡೆಯುತ್ತಿರುವ ಸಾರ್ವಜನಿಕ ಆಲಿಕೆ ಸಭೆಯನ್ನು ತಾನು ಕಂಡಿದ್ದೇನೆ ಎಂದು ತಿಳಿಸುತ್ತಾ, ಸದರಿ ಗಣಿ ಉದ್ದಿಮೆಯವರಿಗೆ ಶುಭ ಹಾರೈಸಿದರು ಮತ್ತು ತಮ್ಮ ಅಭಿಪ್ರಾಯವನ್ನು ಲಿಖಿತ ರೂಪದಲ್ಲಿ ಸಲ್ಲಿಸುವದಾಗಿ ಸಭೆಗೆ ತಿಳಿಸಿದರು. ಸದರಿ ಪ್ರತಿಯನ್ನು ಅನುಬಂಧ-4ರಂತೆ ಸಲ್ಲಿಸಲಾಗಿದೆ.

3. ಶ್ರೀ. ಮಂಜುನಾಥ ಪಾಟೀಲ, ಜಾಲಿಕಟ್ಟಿ ಬಿ.ಕೆ.

- ಸದರಿ ಗಣಿ ಉದ್ದಿಮೆಯವರು ಕಳೆದ 20 ವರ್ಷಗಳಿಂದ ಗಣಿ ಉದ್ದಿಮೆಯನ್ನು ನಡೆಸುತ್ತಿದ್ದಾರೆಂದು ಸಭೆಗೆ ತಿಳಿಸಿದರು.



Scanned by CamScanner

- ಸದರಿ ಸುಣ್ಣದ ಕಲ್ಲು ಗಣಿಗಾರಿಕೆಯನ್ನು 20,000 ಟಿ.ಪಿ.ಎ. ದಿಂದ 1,00,000 ಟಿ.ಪಿ.ಎ.ಗೆ ಹೆಚ್ಚಿಸುವ ಕುರಿತು ಪರಿಸರ ಕಾಪಾಡುವ ನಿಟ್ಟಿನಲ್ಲಿ ಸೂಕ್ತ ಕ್ರಮಗಳನ್ನು ಕೈಗೊಂಡರೆ ಸದರಿ ಯೋಜನೆಗೆ ತಮ್ಮ ಯಾವುದೇ ಅಭ್ಯಂತರವಿರುವುದಿಲ್ಲವೆಂದು ಸಭೆಗೆ ತಿಳಿಸಿದರು.

4. ಶ್ರೀ. ದುಂಡಪ್ಪಾ ಮಾದರ, ಜಾಲಿಕಟ್ಟಿ ಬಿ.ಕೆ.

- ಸದರಿ ಗಣಿ ಉದ್ದಿಮೆಯಿಂದ ತಮಗೆ ಇಲ್ಲಿಯವರೆಗೆ ಯಾವುದೇ ರೀತಿಯ ತೊಂದರೆಗಳು ಉಂಟಾಗುತ್ತಿರುವುದಿಲ್ಲವೆಂದು ಸಭೆಗೆ ತಿಳಿಸಿದರು.
- ಸದರಿ ಗಣಿ ಉದ್ದಿಮೆಯವರು ವಾಯು ಮಾಲಿನ್ಯ ಮತ್ತು ಜಲ ಮಾಲಿನ್ಯ ನಿಯಂತ್ರಣ ಕ್ರಮಗಳನ್ನು ಅಳವಡಿಸಿದ್ದು ಹಾಗೂ ಸುಮಾರು 04 ಎಕರೆ ಗಣಿಗಾರಿಕೆ ಪ್ರದೇಶದ ಗಡಿಯುದ್ದಕ್ಕೂ ಗಿಡ ಗಂಟಿಗಳನ್ನು ಬೆಳೆಸಿರುತ್ತಾರೆ ಎಂದು ತಿಳಿಸಿದರು.
- ಆದ್ದರಿಂದ, ಸದರಿ ಸುಣ್ಣದ ಕಲ್ಲು ಗಣಿಗಾರಿಕೆಯ ಸಾಮರ್ಥ್ಯವನ್ನು 20,000 ಟಿ.ಪಿ.ಎ. ದಿಂದ 1,00,000 ಟಿ.ಪಿ.ಎ.ಗೆ ಹೆಚ್ಚಿಸಲು ತಮ್ಮ ಯಾವುದೇ ತಕರಾರು ಇರುವುದಿಲ್ಲವೆಂದು ಸಭೆಗೆ ತಿಳಿಸಿದರು.

5. ಶ್ರೀ. ಮಂಜುನಾಥ ಮಾದರ, ಜಾಲಿಕಟ್ಟಿ ಬಿ.ಕೆ.

- ಸದರಿ ಗಣಿ ಉದ್ದಿಮೆಯವರು ಸುತ್ತಮುತ್ತಲಿನ ಪ್ರದೇಶವನ್ನು ತುಂಬಾ ಸ್ವಚ್ಛವಾಗಿಟ್ಟುಕೊಂಡಿರುತ್ತಾರೆಂದು ಸಭೆಗೆ ತಿಳಿಸಿದರು.
- ಸದರಿ ಗಣಿ ಉದ್ದಿಮೆಯವರು ಯಾವುದೇ ರೀತಿಯ ಮಾಲಿನ್ಯವಾದರೂ ಸಹ ಅದರ ಕುರಿತು ತುರ್ತಾಗಿ ಕ್ರಮ ಕೈಗೊಳ್ಳುತ್ತಾರೆ ಮತ್ತು ಇನ್ನೂ ಮುಂದೆಯೂ ಸಹ ಇದೇ ರೀತಿ ನಡೆಸಿಕೊಂಡು ಹೋಗುತ್ತಾರೆಂದು ತಮ್ಮ ವಿಶ್ವಾಸವನ್ನು ವ್ಯಕ್ತಪಡಿಸಿದರು.

ಸ್ಥಳೀಯ ಸಾರ್ವಜನಿಕರು ತಮ್ಮ ಅಹವಾಲನ್ನು ಲಿಖಿತ ರೂಪದಲ್ಲಿ ಸಾರ್ವಜನಿಕ ಪರಿಸರ ಕುರಿತು ಆಲಿಕೆ ಸಭೆಯಲ್ಲಿ ಸಲ್ಲಿಸಿದರು. ಈ ಸಲ್ಲಿಕೆಯ ಪ್ರತಿಗಳನ್ನು ಅನುಬಂಧ-5ರ ಮೂಲಕ ಲಗತ್ತಿಸಲಾಗಿದೆ.

ಶ್ರೀ. ದುರಗೇಶ ಕೆ ರುದ್ರಾಕ್ಷಿ, ಮಾನ್ಯ ಅಪರ ಜಿಲ್ಲಾಧಿಕಾರಿಗಳು, ಬಾಗಲಕೋಟೆ ಜಿಲ್ಲೆ ಹಾಗೂ ಅಧ್ಯಕ್ಷರು, ಸಭೆಯಲ್ಲಿ ಸಾರ್ವಜನಿಕರು ಕೇಳಿದ ಪ್ರಶ್ನೆಗಳು ಮತ್ತು ಈ ಪ್ರಶ್ನೆಗಳಿಗೆ ಪರಿಸರ ತಜ್ಞರು ನೀಡಿದ ಉತ್ತರಗಳು ಮತ್ತು ಯೋಜನೆಯ ಅವಶ್ಯಕತೆ ಮತ್ತು ಯೋಜನೆಯಿಂದ ಆಗಬಹುದಾದ ಪರಿಣಾಮಗಳು ಮತ್ತು ಅವುಗಳನ್ನು ತಡೆಗಟ್ಟಲು ಹಾಗೂ ನಿಯಂತ್ರಿಸಲು ಹಾಗೂ ಯೋಜನೆಗಾರರು ನೀಡಿದ ಭರವಸೆಗಳನ್ನುಅವಲೋಕಿಸಿ ಈ ಕೆಳಗಿನಂತೆ ಸಲಹೆ ಸೂಚನೆಗಳನ್ನು ನೀಡಿದರು.

- ಸ್ಥಳೀಯ ಗ್ರಾಮಸ್ಥರ ಸಮಸ್ಯೆಗಳನ್ನು ಆಲಿಸಿ ಅವುಗಳ ಪರಿಹಾರಕ್ಕೆ ತುರ್ತು ಕ್ರಮ ಕೈಗೊಳ್ಳುವುದು.



Scanned by CamScanner

* ವಾಯ್ಯು ಮಾಲಿನ್ಯ, ಶಬ್ದ ಮಾಲಿನ್ಯ ಹಾಗೂ ಧೂಳು ನಿಯಂತ್ರಣಕ್ಕಾಗಿ ಸೂಕ್ತ ಉಪಕರಣಗಳನ್ನು ಅಳವಡಿಸಿ ಸುತ್ತ ಮುತ್ತಲಿನ ಗ್ರಾಮಸ್ಥರ ಹಾಗೂ ಕಾರ್ಮಿಕರ ಆರೋಗ್ಯದ ಮೇಲೆ ಯಾವುದೇ ರೀತಿಯ ದುಷ್ಪರಿಣಾಮವಾಗದಂತೆ ಎಚ್ಚರಿಕೆ ವಹಿಸುವುದು.
* ಗಣಿ ಉದ್ದಿಮೆಯಲ್ಲಿ ವಿನಾಯಿತಿ ಮೇರೆಗೆ ಸ್ಥಳೀಯ ಗ್ರಾಮಸ್ಥರಿಗೆ ಉದ್ಯೋಗ ಅವಕಾಶಗಳನ್ನು ಒದಗಿಸಲು ಕ್ರಮ ಕೈಗೊಳ್ಳುವುದು.
* ಗಣಿ ಉದ್ದಿಮೆಯವರು ಸುತ್ತಮುತ್ತಲಿನ ಗ್ರಾಮಸ್ಥರ ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿಗಾಗಿ ಯೋಜನೆಗಳನ್ನು ಹಮ್ಮಿಕೊಳ್ಳವುದು. ಸುತ್ತಮುತ್ತಲಿನ ಗ್ರಾಮಗಳ ಪ್ರಾಥಮಿಕ ಶಿಕ್ಷಣ, ಆರೋಗ್ಯ ವ್ಯವಸ್ಥೆ, ಕುಡಿಯುವ ನೀರಿನ ಸರಬರಾಜು ಸೇವೆಗಳಿಗೆ ಆದ್ಯತೆ ನೀಡಬೇಕು.
* ಸದರಿ ಗಣಿ ಉದ್ದಿಮೆಯವರು ಸೂಕ್ತ ಹಸಿರು ಪಟ್ಟಿಯನ್ನು ಗಣಿ ಉದ್ದಿಮೆಯ ಸುತ್ತಮುತ್ತಲು ಬೆಳೆಸಬೇಕು.
* ಸದರಿ ಗಣಿ ಉದ್ದಿಮೆಯವರು ಗಣಿ ಮತ್ತು ಭೂವಿಜ್ಞಾನ ಇಲಾಖೆಯವರು ಸಮ್ಮತಿಸಿದ ಸುಣ್ಣದ ಕಲ್ಲು ಉತ್ಪಾದನೆಯ ಕಳೆದ 10 ವರ್ಷಗಳ ದಾಖಲೆಗಳನ್ನು ಸಲ್ಲಿಸಬೇಕು.
* ಸದರಿ ಗಣಿ ಉದ್ದಿಮೆಯವರು ಮಳೆಗಾಲದ ಸಮಯದಲ್ಲಿ ಮಣ್ಣಿನ ಸವಕಳಿಯನ್ನು ತಡೆಗಟ್ಟುವ ನಿಟ್ಟಿನಲ್ಲಿ ಚೆಕ್ ಡ್ಯಾಮ್, ರಿಟೆನಿಂಗ್ ವಾಲ್ಸ್(ತಡೆ ಗೋಡೆ) ಗಳನ್ನು ನಿರ್ಮಿಸಬೇಕು.
* ಸದರಿ ಗಣಿ ಉದ್ದಿಮೆಯವರು ಸುರಕ್ಷತಾ ಕ್ರಮಗಳನ್ನು ಕೈಗೊಂಡಿರುವುದಿಲ್ಲ.

ಸಭೆಯಲ್ಲಿ ಕೇಳಲಾದ ಪ್ರಶ್ನೆಗಳು, ಆಕ್ಷೇಪಣೆಗಳು ಹಾಗೂ ಅವುಗಳಿಗೆ ನೀಡಿದ ಉತ್ತರ ಇವೆಲ್ಲವುಗಳನ್ನು ವಿಡಿಯೋ ರೇಕಾರ್ಡಿಂಗ ಮಾಡಲಾಗಿದ್ದು, ಅದನ್ನು ಸರ್ಕಾರದ ಪರಿಸರ ಹಾಗೂ ಅರಣ್ಯ ಸಚಿವಾಲಯಕ್ಕೆ ಕಳಿಸಲಾಗುವುದೆಂದು ತಿಳಿಸಿದರು. ಕಾರಣ ಕಾರ್ಖಾನೆಯ ಸುತ್ತಮುತ್ತಲಿನ ಪ್ರದೇಶದಲ್ಲಿ ವಾಸಿಸುವ ಗ್ರಾಮಸ್ಥರ ಹಾಗೂ ಕಾರ್ಖಾನೆಯಲ್ಲಿ ಕೆಲಸ ಮಾಡುವ ಕಾರ್ಮಿಕರ ಆರೋಗ್ಯದ ಮೇಲೆ ಯಾವುದೇ ರೀತಿಯ ದುಷ್ಪರಿಣಾಮವಾಗದಂತೆ ಎಲ್ಲಾ ಅವಶ್ಯಕ ಎಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕೆಂದು ಅಧ್ಯಕ್ಷರು ಸಭೆಯ ಆಯೋಜಕರಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.ನಂತರ ಸಾರ್ವಜನಿಕ ಅಭಿಪ್ರಾಯವನ್ನು ಆಲಿಸಿ ಸಭೆಯಲ್ಲಿ ಉಪಸ್ಥಿತವಿದ್ದ ಎಲ್ಲಾ ಸಾರ್ವಜನಿಕರು ನಿಯೋಜಿತ ಘಟಕದ ಸ್ಥಾಪನೆಯ ಪರವಾಗಿ ನೀಡಿದ ತಮ್ಮ ಅಭಿಪ್ರಾಯವನ್ನು ದಾಖಲಿಸಿಲಾಯಿತು.

ಅಂತಿಮವಾಗಿ ಶ್ರೀ ಎಮ್ ಎ ಮನಿಯಾರ, ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪ್ರಾದೇಶಿಕ ಕಛೇರಿ, ಬಾಗಲಕೋಟೆ, ಇವರು ಸಭೆಯ ಅಧ್ಯಕ್ಷತೆಯನ್ನು ವಹಿಸಿದ ಮಾನ್ಯ ಅಪರ ಜಿಲ್ಲಾಧಿಕಾರಿಗಳು, ಬಾಗಲಕೋಟೆ ಇವರಿಗೆ, ಮಾನ್ಯ ಹಿರಿಯ ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ವಲಯ ಕಛೇರಿ, ಧಾರವಾಡ ಇವರಿಗೆ ಹಾಗೂ ಇತರೆ ಇಲಾಖೆಯ ಅಧಿಕಾರಿಗಳಿಗೆ, ನಿಯೋಜಿತ ಯೋಜನೆಯ ಸಂಚಾಲಕರಿಗೆ, ಸಿಬ್ಬಂಧಿಗಳಿಗೆ, ಸಾರ್ವಜನಿಕರಿಗೆ ಮತ್ತು ಪೋಲಿಸ್ ಸಿಬ್ಬಂಧಿಯವರಿಗೆ ತಮ್ಮ ಮಂಡಳಿ ಪರವಾಗಿ ವಂದನೆಗಳನ್ನು ಸಲ್ಲಿಸಿದರು.

ಸಹಿ/-
ಶ್ರೀ. ದುರಗೇಶ ಕೆ ರುದ್ರಾಕ್ಷಿ,
ಅಪರ ಜಿಲ್ಲಾಧಿಕಾರಿಗಳು ಬಾಗಲಕೋಟೆ
ಮತ್ತು
ಅಧ್ಯಕ್ಷರು ಸಾರ್ವಜನಿಕ ವಿಚಾರಣಾ
ಸಮಿತಿ ಬಾಗಲಕೋಟೆ, ಕರ್ನಾಟಕ.

ಪರಿಸರ ಅಧಿಕಾರಿ
ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
ಬಾಗಲಕೋಟೆ



Scanned by CamScanner